ಎಲ್ಲಿ? ಅವರ ಪರಿಸ್ಥಿತಿ ಏನು? ತಾವು ನಮ್ಮ ಕಡೆ ತಿರುಗಿ ನೋಡಿದರೂ ಏನೂ ಪ್ರಯೋಜನ ಇಲ್ಲ. ನಮ್ಮ ಸಂಖ್ಯೆ ಬಹಳ ಕಡಿಮೆ. ಅವರ ಪರಿಸ್ಥಿತಿ ಏನು? ಮಾನ್ಯಮುಖ್ಯ ಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ. ಬೇರೆ ಮಂತ್ರಿಗಳು ಇಲ್ಲ. ಬಹುತೇಕ ಮಂತ್ರಿಗಳು ಇಲ್ಲ. ಬಹುತೇಕ ಸದಸ್ಯರು ಇಲ್ಲ.

ಶ್ರೀ ಚಂದ್ರಶೇಖರ ಮಾಮನಿ: ಮಾನ್ಯ ಅಧ್ಯಕ್ಷರೇ ಯಾರಿಗೂ ಏನೂ ಆಗಿಲ್ಲ ಅವರು ಭಯಪಡುವಂತಹ ಅವಶ್ಯಕತೆ ಇಲ್ಲ.

ಅಧ್ಯಕ್ಷರು: ಸದನ ಇವತ್ತು 10 ಗಂಟೆಗೆ ಇದೆ ಎಂದು ನಾವು ಎಲ್ಲಾ ಸದಸ್ಯರಿಗೂ ಸೂಚನೆ ಕೊಟ್ಟಿದ್ದೇವೆ. ನಾನು ಬಂದಿದ್ದೇನೆ. ಕೋರಂ ಇದೆ. ಉತ್ತರ ಕೊಡುವ ಸಚಿವರು ಇದ್ದಾರೆ ಅದ್ದರಿಂದ ಈಗ ಪ್ರಶ್ನೋತ್ತರ ಶುರು ಮಾಡೋಣ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವುದು.

230 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಭಾಗೇಪಲ್ಲಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಿ ಹಕ್ಕು ಪತ್ರಗಳನ್ನು ನೀಡುವ ಕಾರ್ಯಕ್ರಮ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಪೂರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸಲು ತಾಲ್ಲುಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚನೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಇ) ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಬೇಕಾಗಿರುವ ಸಿಬ್ಬಂದಿ ಕೊರತೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕೊರತೆಯನ್ನು ನೀಗಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ಸದ್ಯಕ್ಕೆ ಸಮಿತಿಗಳನ್ನು ಸ್ಥಗಿತಗೊಳಿಸಲಾಗಿದೆ. ಆದಷ್ಟು ಬೇಗ ಸಮಿತಿಗಳನ್ನು ಪುನರ್ ರಚಿಸಿ ಬಾಕಿ ಉಳಿದಿರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು.

ಆ) ಇಲ್ಲ, ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಪುನರ್ ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಇಲ್ಲ

ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಸರಿಯಾಗಿಲ್ಲ. ಅವರು ಉತ್ತರದಲ್ಲಿ ಸಮಿತಿಗಳನ್ನು ಆದಷ್ಟು ಬೇಗ ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೊಂದು ಕಡೆ ಹೇಳುತ್ತಾರೆ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷರ ಸಮಿತಿಗಳನ್ನು ಪುನರ್ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸರ್ಕಾರ ಅಧಿಕಾರಕ್ಕೆ ಬಂದು 9 ತಿಂಗಳಾದರೂ ಸಹ ತಾಲ್ಲೂಕು ಮಟ್ಟದಲ್ಲಿ ಇರುವ ಸಮಿತಿಗಳು ಬಹು ಮುಖ್ಯವಾದ ಸಮಿತಿಗಳು, ಬಡವರು ಸುಮಾರು ವರ್ಷಗಳಿಂದ ಆ ಭೂಮಿಗಳನ್ನು ಉಳಿಮೆಮಾಡಿಕೊಂಡು ಬಂದಿದ್ದಾರೆ, ಆ ಭೂಮಿಗೆ ಖಾತೆಯನ್ನು ಮಾಡಿಕೊಡದೇ ಮಂಜೂರು ಮಾಡದೇ ಇರುವುದರಿಂದ ಕಾನೂನಿನ ದೃಷ್ಟಿಯಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಉದ್ಭವವಾಗಿದೆ. ಈ ಸಮಿತಿಗಳನ್ನು ರಚನೆ ಮಾಡಲು ಏತಕ್ಕೆ ತಡ ಮಾಡುತ್ತಿದ್ದೀರಿ? ಇದಕ್ಕೆ ನಿಜವಾದ ಕಾರಣ ಏನು? ಈ ಸಮಿತಿಗಳನ್ನು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಿಸುತ್ತೇನೆಂದು ಹೇಳಿದ್ದಿರಿ ಇದು, ಔಚಿತ್ಯವೇ? ಸಮಿತಿಗಳೇ ಇಲ್ಲ ಇನ್ನು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷರನ್ನಾಗಿ ನೇಮಿಸುವುದು ಹೇಗೆ? ಇದು ಔಚಿತ್ಯವೇ?

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೇ ಹಿಂದೇ ಈ ಸದನದಲ್ಲಿಯೇ ಈ ವಿಷಯದ ಬಗ್ಗೆ ತೀರ್ಮಾನವಾಗಿದೆ. ಆ ಬಗ್ಗೆ ತಿದ್ದುಪಡಿ ಕೂಡ ಮಾಡುತ್ತೇವೆ. ಒಟ್ಟು 4 ಲಕ್ಷ 61 ಸಾವಿರ ಕೇಸ್‌ಗಳು ಬಾಕಿ ಇವೆ. ಬೇಗ ಮುಗಿಸುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ ನಾನು ಸಿಬ್ಬಂದಿ ಕೊರತೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಅಂತ ಉತ್ತರದಲ್ಲಿ ಹೇಳಿದ್ದಾರೆ. ಇದು 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ನನಗೆ ಗೊತ್ತಿರತಕ್ಕಂಥ ಮಾಹಿತಿ ಪ್ರಕಾರ ಸರ್ವೆ ಮಾಡುವಂತಹ ಸಿಬ್ಬಂದಿಯ ಕೊರತೆ ಇದೆ. ಸರ್ವೆಯರ್‌ಗಳಿಲ್ಲದ್ದೆ ಇರುವ ಕಾರಣ ಸರ್ವೆ ಮಾಡುವಂತಹ ಕೆಲಸ ಕೂಡ ಪೂರ್ತಿ ಆಗಿಲ್ಲ. ಎರಡನೇ ಅಂಶ ಎನೆಂದರೆ ಸರ್ವೆ ಆಗಿರತಕ್ಕಂಥ ಸಂದರ್ಭದಲ್ಲಿ ಹಲವಾರು ಕಡೆ ಭ್ರಷ್ಟಾಚಾರ ಆಗಿರುವುದು ಕಂಡು ಬರುತ್ತದೆ. ನಿಜವಾಗಿಯೂ ಯಾರು ಭೂಮಿಯನ್ನು ಉಳಿಮೆ ಮಾಡುತ್ತಿದ್ದಾರೆ ಎಂದು ವರದಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ತೀವ್ರವಾದ ಸಮಸ್ಯೆ ಉದ್ಭವವಾಗಿದೆ. ಆದ್ದರಿಂದ ತಾವು ಸಿಬ್ಬಂದಿ ಕೊರತೆ ಇಲ್ಲ ಎಂದು ಹೇಳುವುದು ತಪ್ಪು ಮಾಹಿತಿ ಕೊಟ್ಟಂತೆ ಅಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಾದ ರೆಡ್ಡಿಯವರು ಹೇಳುವ ವಿಚಾರದಲ್ಲಿ ಸತ್ಯ ಇದೆ. ಸುಮಾರು 1300 ಸರ್ವೆಯರ್ ರಿಕ್ರೂಟ್‌ಮೆಂಟ್ ಮಾಡುತ್ತೇವೆ. ಅಯಾಯಾ ಜಿಲ್ಲೆಯಲ್ಲಿಯೇ ಅವರಿಗೆ ತರಬೇತಿಯನ್ನು ಕೂಡಬೇಕೆಂದು ಮಾಡಿದ್ದೇವೆ. ಎಲ್ಲಿ ಬೇರೆಯವರ ಹೆಸರಿಗೆ ಭೂಮಿ ಬರೆದಿದ್ದಾರೆ ಅದು ಎಲ್ಲೆಲ್ಲಿ ನಮ್ಮ ನೋಟೀಸ್‌ಗೆ ಬಂದಿದೆ ಅಂಥ ಕಡೆಗಳಲ್ಲಿ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಹತ್ತಿರ ಏನಾದರೂ ಮಾಹಿತಿ ಇದ್ದರೆ ಒದಗಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ ಬಗರ್ ಹುಕ್ಕುಂ ಸಾಗುವಳಿ ಮಾಡಿರುವವರು ನೂರಕ್ಕೆ ತೊಂಬತ್ತು ಭಾಗದ ಜನ ಬಡವರು ಹರಿಜನ ಮತ್ತು ಗಿರಿಜನರು. ಮಾನ್ಯ

ಮಂತ್ರಿಗಳಿಗೆ ಗೊತ್ತಿದೆ ಇವತ್ತು ಅರಣ್ಯ ಇಲಾಖೆಯ ಭೂಮಿಯನ್ನು ಬಗರ್ ಹುಕ್ಕುಂ ಸಾಗುವಳಿ ಮಾಡಿದ್ದಾರೆ ಅಲ್ಲಿ ಅಧಿಕಾರಿಗಳು ಹೋಗಿ ಬಲತ್ಕಾರವಾಗಿ ವಕ್ಕಲು ಎಬ್ಬಿಸಿ ಕಿರುಕುಳ ಕೊಡುತ್ತಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 8 ತಿಂಗಳು ಆದರೂ ಇದುವರೆಗೂ ಸಮಿತಿಗಳನ್ನು ರಚನೆ ಮಾಡಿಲ್ಲ ತಾವು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಆ ಬಗ್ಗೆ ನನ್ನ ಚಿಂತೆ ಇಲ್ಲ. ಸಮಿತಿಗಳನ್ನು ಮಾಡುವುದಕ್ಕೆ ತಮಗೆ ತೊಂದರೆ ಏನು? ಮತ್ತು 8 ತಿಂಗಳಲ್ಲಿ ತಾವು ಸರ್ವೆ ಮಾಡುವ ಸರ್ವೆಯರ್ಸನ್ನು ನೇಮಕ ಮಾಡಿಕೊಳ್ಳಲಿಲ್ಲ ಅಂದ್ರೆ ಹೇಗೆ? ಅವರಿಗೆ ಹೇಗೆ ರಕ್ಷಣೆಯನ್ನು ಕೊಡುತ್ತೀರಿ? ತಾವು ತೀರ್ಮಾನ ಕೈಗೊಳ್ಳುವವರೆಗೂ ಅಧಿಕಾರಿಗಳು ಹೋಗಿ ಬಡವರಿಗೆ ತೊಂದರೆ ಕೊಡುವುದು ಕಿರುಕುಳ ಕೊಡುವುದನ್ನು ನಿಲ್ಲಿಸಲು ಒಂದು ಆದೇಶ ಹೊರಡಿಸುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ:- ಎಲ್ಲೆಲ್ಲಿ ಬಗರ್ ಹುಕ್ಕುಂ ಸಾಗುವಳಿಗೆ ಅರ್ಜಿಗಳನ್ನು ಹಾಕಿಕೊಂದ್ದಾರೋ ಅವರಿಗೆ ಕಿರುಕುಳ ಕೊಡಬಾರದು ಎಂದು ಆದೇಶ ಕೊಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಅವರ ಪ್ರಶ್ನೆಯಲ್ಲಿ ಶಾಸಕರನ್ನು ಸಮಿತಿಗಳ ಅಧ್ಯಕ್ಷರನ್ನಾಗಿ ಮಾಡುತ್ತೀರಾ ಅಂತ ಹೇಳಿದ್ದಾರೆ. ಇಲ್ಲ ಅಂತ ತಾವು ಹೇಳಲು ಏನಾದರೂ ಕಾರಣಗಳು ಕೊಡಬೇಕಲ್ಲ. ಅಂತಹ ಬಲವಾದ ಕಾರಣಗಳು ಏನು?

ಶ್ರೀ ಆರ್. ಎಲ್. ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಈ ವಿಷಯ ಈ ಸದನದಲ್ಲಿ ಚರ್ಚೆ ಆಗಿದೆ. ಪುನಃ ಆ ಬಗ್ಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ ಅಂತ ನನಗನಿಸುತ್ತದೆ. ತಾವು ಧರಣ ಎಲ್ಲಾ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ತಾವು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುದಿಲ್ಲ ಅಂದರೆ ಕಾರಣ ಬೇಕಿಲ್ಲ. ತಾವು ಉಪವಿಭಾಗಾಧಿಕಾರಿಗಳನ್ನು ಮಾಡಿ ಆ ಪ್ರಶ್ನೆ ಅಲ್ಲ. ಆದರೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದಿಲ್ಲ ಎಂದು ಹೇಳಲು ಕಾರಣಗಳು ಏನು?

ಶ್ರೀ ಆರ್.ಎಲ್.ಜಾಲಪ್ಪ:- ಅಧ್ಯಕ್ಷರೇ, ತಮ್ಮ ಅಧ್ಯಕ್ಷತೆಯಲ್ಲೇ ಬೇಕಾದಷ್ಟು ಅದರ ಬಗ್ಗೆ ಚರ್ಚೆಯಾಗಿದೆ. ಅದರ ಪುನರಾವರ್ತನೆ ಅನಾವಷ್ಯಕವಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಆ ಬೇಡಿಕೆ ನನ್ನದಿಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಮಾಡುತ್ತೀರಾ ಅಂತ ಕೇಳಿದ್ದಕ್ಕೆ ಇಲ್ಲ ಎಂದಿರಿ, ಕಾರಣವೇನು?

ಅಧ್ಯಕ್ಷರು: ಅದು ಅವರ ಸರ್ಕಾರದ ನೀತಿ.

ಶ್ರೀ ವಾಟಾಳ್ ನಾಗರಾಜ್: ಶಾಸಕರನ್ನು ಮಾಡುವುದಿಲ್ಲವೆಂಬ ಕಲ್ಪನೆ ತಮ್ಮ ಮನಸ್ಸಿಗೆ ಬರಲು ಕಾರಣವೇನು ನಾನು ಕೇಳುತ್ತಿರುವುದಷ್ಟೆ.

ಅಧ್ಯಕ್ಷರು: ಇಲಾಖೆ ಚರ್ಚೆ ಬಂದಾಗ ಇದರ ಬಗ್ಗೆ ಮಾತನಾಡಿ. ಈಗ ಮುಂದೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ನಾವು ಶಾಸಕರನ್ನು ಮಾಡಿದಂತಹ ಉದ್ದೇಶ ಏನಿತ್ತು ಅಂದರೆ ಅನೇಕ ಸ್ಥಳೀಯ ಸಂಸ್ಥೆಗಳ ಬಗ್ಗೆ ಅವರಿಗೆ ಗೊತ್ತಿರುತ್ತದೆ.

ಅಧ್ಯಕ್ಷರು: ಇದೆಲ್ಲ ಚರ್ಚೆಯಾಗಿದೆ. ಹತ್ತೂಕಾಲಿಗೆ ನಾವು ಸದನ ಪ್ರಾರಂಭಮಾಡಿದ್ದೇವೆ. ಹನ್ನೊಂದುಕಾಲರ ನಂತರ ಒಂದು ನಿಮಿಷವೂ ಕ್ವೆಶ್ಚನಅವರ್ ಇರುವುದಿಲ್ಲ ಇವತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಏಕೆಂದರೆ ನಾನ್ ಅಫಿಶಿಯಲ್ಲನ್ನು ಇನವಾಲ್ವ ಮಾಡಿದರೆ ಕೆಲವು ಕಡೆ ಪ್ರಿಜ್ಯುಡೀಸ್ ಇರಬಹುದು, ಕೆಲವು ಕಡೆ ಎಂಎಲ್ಎಗಳ ಪ್ರಿಜ್ಯುಡೀಸ್‌ನಿಂದ ಒಂದೆರಡು ಕೇಸ್ ರಿಜಕ್ಟ ಮಾಡಿದ್ದಿರಬಹುದು. ಆದರೆ ಈ ಅಧಿಕಾರಿಗಳಿಗಿಂತಲೂ ನಾನ್‌ಅಫಿಶಿಯಲ್ಸ ಬೆಟರ್ ಎಂಬ ಅನುಭವ ಮೇಲೆ ಆದನ್ನು ಮಾಡಿದ್ದುದು. ಲ್ಯಾಂಡ್ ಟ್ರಿಬ್ಯೂನಲ್ ಇವೆಲ್ಲ ನೋಡಿದ ಮೇಲೆ ಲ್ಯಾಂಡಗ್ರಾಂಟ್‌ನಲ್ಲಾದರೂ ಕನಿಷ್ಟ ಸ್ಥಳೀಯ ಜನರೆಲ್ಲ ಅವರಿಗೆ ಗೊತ್ತಿರುತ್ತಾರೆ. ಆದರೆ ಇವತ್ತು ಅಧಿಕಾರಿಗಳು ಎಲ್ಲ ಬಹಳ ಉತ್ತಮ, ನಾನ್‌ಅಫಿಶಿಯಲ್ಸ್ ಕೆಟ್ಟವರು ಎಂಬ ರೀತಿಯಲ್ಲಿ ಇವತ್ತು ತಂದಿಟ್ಟಿದ್ದೀರಿ. ಮುಖ್ಯಮಂತ್ರಿಗಳಿಗಿಂತ ಮುಖ್ಯ ಕಾರ್ಯದರ್ಶಿಯೇ ಐಎಎಸ್ ಮಾಡಿ ಹುಷಾರಿರುತ್ತಾರೆ, ಅವರೇ ಅಧಿಕಾರ ನಡೆಸಲಿ ಇನ್ನು ನಾವ್ಯಾಕೆ ಇರಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ: ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೇಳಿದ್ದರು, ಆ ಪುಸ್ತಕದಲ್ಲಿ ಏನೇನಿದೆಯೋ ಅಷ್ಟೂ ನಾನು ಕೊಡುತ್ತೇನೆ ಅಂತ. ಆದರೆ ಇವತ್ತು ಪುಸ್ತಕದಲ್ಲಿರುವುದಲ್ಲ, ಹೊರಗಡೆ ಕೂಡ ಏನೂ ಕೊಡುತ್ತಿಲ್ಲ. ಚರ್ಚೆಯಾಗಿದ್ದಷ್ಟೇ ಸಮಾಧಾನವಾಗಿದೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ನೇರವಾಗಿ ಅಪಮಾನ ಮತ್ತು ಅಗೌರವವನ್ನು ಸೂಚಿಸತಕ್ಕಂತಹ ಉತ್ತರ ಇದು. ಶಾಸಕರನ್ನು ಏಕೆ ಅಧ್ಯಕ್ಷರನ್ನು ಮಾಡಲಿಲ್ಲವೆಂದು ಅವರು ಹೇಳಿಬಿಟ್ಟರೆ ಆ ಕಳಂಕದಿಂದ ನಾವು ಹೊರಗಡೆ ಬರುತ್ತೇವೆ. ಇಲ್ಲದಿದ್ದರೆ ನಮ್ಮ ಮೇಲೊಂದು ಗೂಬೆಕೂರಿಸಿ ಕಪ್ಪುಚುಕ್ಕೆಯನ್ನು ಇಡೀ ಶಾಸಕರ ಮೇಲೆ ಇಟ್ಟಹಾಗಾಗುತ್ತದೆ. ಆದ್ದರಿಂದ ಇದು ಇತ್ಯರ್ಥವಾಗಬೇಕು. ತಾವು ನಮ್ಮ ಮೇಲೆ ಬೇಜಾರು ಮಾಡಿಕೊಳ್ಳಬಾರದು. ಈ ಪ್ರಶ್ನೆ ಅತ್ಯಂತ ಮಹತ್ವದ ಪ್ರಶ್ನೆ. ಇಡೀ ಸದನದ ಹಾಗೂ ಎಲ್ಲ ಪಕ್ಷದ ಗೌರವದ ಪ್ರಶ್ನೆ. ಅದಕ್ಕೆ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ ತಾವು ಏಕೆ ಮಾಡಲಿಲ್ಲವೆಂದು ಹೇಳಿಬಿಟ್ಟರೆ ನನ್ನ ಅಭ್ಯಂತರ, ತಕರಾರೇನೂ ಇರುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ಅಧ್ಯಕ್ಷರೇ, ಒಂದು ಸಮಿತಿಗೆ ಅಧ್ಯಕ್ಷರಾಗಲಿಲ್ಲವೆಂದಾಕ್ಷಣ ಶಾಸಕರಿಗೆಲ್ಲ ಗೌರವ ಹೋಯಿತೆಂಬ ಅಭಿಪ್ರಾಯಕ್ಕೆ ಅವರು ಬರುವುದಾದರೆ ನಾನು ಅದಕ್ಕೆ ವಿಷಾದಪಡಬೇಕಾಗುತ್ತದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಇದು ಚರ್ಚೆ ಮುಗಿಯಬೇಕು. ಇಂತ ಬಹಳ ಪ್ರಕರಣಗಳು ನಮ್ಮ ಬಳಿ ಬಂದಿವೆ. ಅವೆಲ್ಲ ಬೇಡ. ನಾನ್‌ಅಫಿಶಿಯಲ್ಸ್ ಅದರಲ್ಲಿ ಇದ್ದೇ ಇರುತ್ತಾರೆ. ಬರೀ ಆಫೀಸರ್ಸ್ ಇರುವುದಿಲ್ಲ. ಅಲ್ಲಿ ಏನೂ ತೊಂದರೆಯಾಗಲಾರದು. ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಪುನಃ ಇದರ ಬಗ್ಗೆ ಕಾಲವ್ಯಯ ಮಾಡುವುದು ಸಮರ್ಥವಲ್ಲವೆಂದು ಅಭಿಪ್ರಾಯಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅವರು ಹೇಳುವ ಉತ್ತರ ಸಮಂಜಸವಲ್ಲ ಕೆಲವು ಕಥೆ ಒಬ್ಬಿಬ್ಬರ ಶಾಸಕರಿಂದ.

ಶ್ರೀ ಆರ್.ಎಲ್. ಜಾಲಪ್ಪ: ಇದೇ ಶಾಸಕರೇ ಪ್ರಾರಂಭವಾದಾಗಿನಿಂದ ಕಡೆಯವರೆಗೂ ಇವರು ಅಟೆಂಡ್ ಮಾಡಿರುವುದು ಮೂರು ಸಮಿತಿಗಳಿಗೆ.

ಶ್ರೀ ವಾಟಾಳ್ ನಾಗರಾಜ್: ನನ್ನ ಬಗ್ಗೆ ಅವರು ಹೇಳಿದ್ದಾರೆ, ಅದರ ಕ್ಷೇತ್ರದಲ್ಲಿ ಎಷ್ಟು ಹೋಗಿದ್ದಾರೆ? ನನ್ನದಕ್ಕೆ ಕಾರಣ ನಾನು ಹೇಳುತ್ತೇನೆ: ಇನ್ನೊಬ್ಬ ಸದಸ್ಯರು ಆ ಸಮಿತಿಯಲ್ಲಿದ್ದಾಗ ಆ ಸದಸ್ಯರು ಸಹಕಾರ ಕೊಡದೆ ಹೆಜ್ಜೆಹೆಜ್ಜೆಗೂ ಪ್ರತಿ ಅರ್ಜಿಯನ್ನು ನೋಡಿನೋಡಿ ಆ ಬಡಜನರ ಪ್ರಶ್ನೆ ಬಗೆಹರಿಸುವ ವ್ಯವಸ್ಥೆಗೆ ಹೋಗದೇ ಇದ್ದಾಗ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ನಾನು ಸದನದ ಎಲ್ಲ ಸದಸ್ಯರ ಪರವಾಗಿ ಮಾತನಾಡುತ್ತೇನೆ. ಆ ರೀತಿ ಇದ್ದರೆ ಹೇಳಿ.

Sri. M. Mallikarjuna Kharge: This is uncharitable remark. I take exception. ನಾನೇ ನಿನ್ನೆ ಕೇಳಿದೆ, ಮಂತ್ರಿಗಳಿಲ್ಲ ನೀವು

(ಗೊಂದಲ)

ಅನೇಕ ಕಾರಣಗಳಿರಬಹುದು, ಅನೇಕ ಮೀಟಿಂಗಗಳಾಗುವುದಿಲ್ಲ. ಅವರು ಕೇಳಿದ ತಕ್ಷಣ ನೀವು ಸಭೆಗಳಿಗೆ ಹೋಗಿಲ್ಲ ಎಂದರೆ, ಬಾಯಿ ಮುಚ್ಚಿಸುವುದಕ್ಕೋಸ್ಕರ ಹೇಳುವುದೇ?

ಶ್ರೀ ವಾಟಾಳ್ ನಾಗರಾಜ್: ನಾನು ಯಾವುದೇ ನಿರ್ಣಯ ತಂದಾಗಲೂ ಅಲ್ಲಿ ಬೇರೆಯವರು ವಿರೋಧ ಮಾಡುತ್ತಿದ್ದರು. ಹೀಗೆ ಅಡ್ಡಿಪಡಿಸುವ ಬೇರೆಯವರಿದ್ದಾಗ ನಾವು ಕೆಲಸ ಮಾಡುವುದು ಹೇಗೆ? ಆದರೆ 10 ನಿಮಿಷದಲ್ಲಿ 370 ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇನೆ. ಮತ್ತೊಂದು ದಿವಸ ಸೇರಲು ಹೋದರೆ ಅದು ಆಗಲಿಲ್ಲ. ಕಾರಣವೇನೆಂದರೆ ಈ ಪ್ರಶ್ನೆ ಉದ್ಭವವಾದಾಗ ಪ್ರತಿ ಹೆಜ್ಜೆಗೂ ಬೇರೆ ಸದಸ್ಯರು ವಿರೋಧ ಮಾಡುತ್ತಿದ್ದರು. ನನ್ನದು ಬಿಟ್ಟುಬಿಡಿ. ಸದನದ ಎಲ್ಲ ಸದಸ್ಯರದೂ ಆ ರೀತಿ ಆಗಿದೆಯೇ, ಹೇಳಿ.

ಶ್ರೀ ಮಂಜುನಾಥ ಸಿ ಕುನ್ನೂರು: ನನ್ನ ಮತಕ್ಷೇತ್ರದಲ್ಲಿ ಸುಮಾರು 50 ಸಭೆಗಳನ್ನು ಮಾಡಿದ್ದೇನೆ. ಸರ್ಕಾರಕ್ಕೆ ವರದಿ ಇರಬೇಕು, ಸುಮಾರು 10 ಸಾವಿರ ಎಕರೆ ಜಮೀನನ್ನು ನಾವು ಬಡವರಿಗೆ ಕೊಟ್ಟಿದ್ದೇವೆಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಆರ್.ಎಲ್, ಜಾಲಪ್ಪ: 10 ನಿಮಿಷದಲ್ಲಿ 370 ಅರ್ಜಿಯನ್ನು ವಿಲೆ ಮಾಡಿದೆ ಎಂದು ಹೇಳಿದರು. ಅಂದರೆ ಒಂದು ನಿಮಿಷಕ್ಕೆ 37 ಆಯಿತು, ಅದೆಷ್ಟರಮಟ್ಟಿಗೆ ಪರಿಶೀಲನೆಯಾಗಿದೆಯೋ ಇಲ್ಲವೋ ನನಗರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅರ್ಜಿಯನ್ನು ಪರಿಶೀಲನೆ ಮಾಡಲು ತಹಸೀಲ್ದಾರ್ ಇರುತ್ತಾರೆ, ಎ.ಸಿ. ಇರುತ್ತಾರೆ ಇವರೆಲ್ಲ ಪರಿಶೀಲನೆ ಮಾಡಿ ಕ್ರಮಬದ್ಧವಾಗಿದಯೆಂದು ಹೇಳಿದಾಗ ಕೇವಲ 10 ನಿಮಿಷದಲ್ಲಿ ಮಾಡಿರುವುದು. ಯಾವುವು ತಕರಾರಿವೆ, ಅವಕ್ಕೆ ಸಾಕ್ಷಿಗಳನ್ನು ಕರೆಯಿಸಬೇಕಾಗುತ್ತದೆ ಅವು ನಡೆಯಬೇಕಾಗುತ್ತದೆ. ಕ್ರಮಬದ್ಧವಾದದನ್ನು ವಿಳಂಬ ಮಾಡುವುದು ನಮ್ಮ ಸಮಿತಿಯ ನೀತಿಯಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ಈಗ ಹೇಳಿದ್ದೆಲ್ಲ ಆಗಿದೆ ಅಧ್ಯಕ್ಷರೇ; ಇನ್ನು ಹೇಳುವುದು ಏನೂ ಉಳಿದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದನ್ನು ವಿರೋಧ ಮಾಡುತ್ತ ನಾನು ಹೊರಗಡೆ ಹೋಗುತ್ತೇನೆ. ಏಕೆಂದರೆ ಅವರು ಮಾಡಿರುವಂತಹ ಕೆಟ್ಟ ನೀತಿಯನ್ನು ಮುಚ್ಚಿಕೊಳ್ಳುಂತಹ ಒಂದು ತಂತ್ರ ಇದು.

(ಮಾನ್ಯ ಸದಸ್ಯರು ಧರಣಿ ಕುಳಿತರು.)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಬಗರ ಹುಕುಂ ಸಾಗುವಳಿ ಬಗ್ಗೆ ಅಧಿಕಾರಿಗಳನ್ನು ಅಧ್ಯಕ್ಷರನ್ನು ಮಾಡಿ ಅತ್ಯಂತ ಜಟಿಲ ಪರಿಸ್ಥಿತಿ ಸೃಷ್ಟಿ ಮಾಡಿದೆ ಈ ಸರ್ಕಾರ. ಹಿಂದೆ ಇದ್ದ ಸರ್ಕಾರ ತಹಸೀಲ್ದಾರರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿರುವ ಉದಾಹರಣೆ ನಮ್ಮ ಪಾಂಡವಪುರ ಕ್ಷೇತ್ರದಲ್ಲಿ ಆಗಿದೆ. ಅವತ್ತಿನ ಶಾಸಕರಿಂದ ಸಮಸ್ಯೆ ಆಗಲಿಲ್ಲ. ಪಾಂಡವಪುರದಲ್ಲಿ ತಹಸೀಲ್ದಾರರಿಂದ ಸಮಸ್ಯೆ ಆಯಿತು. ನಿವೃತ್ತಿಯಾಗಬೇಕಾದ ತಹಸಿಲ್ದಾರ್ ರೆವಿನ್ಯೂ ಇಲಾಖೆಯವರು ಸೇರಿ ಪಾಂಡವಪುರಕ್ಷೇತ್ರದಲ್ಲಿ ಹಗರಣಗಳನ್ನು ಸೃಷ್ಟಿಮಾಡಿದ್ದಾರೆ. ಹೊಡೆದಾಡಿ ಕೋರ್ಟಿಗೆ ಹೋಗುವ ನೂರಾರು ಪ್ರಕರಣಗಳು ಸೃಷ್ಟಿಯಾಗಿದೆ. ಅವತ್ತು ಕಾಂಗ್ರೆಸ್ ಪಕ್ಷದ ಶಾಸಕರೇ ಇದ್ದರು. ಆದರೆ ಸ್ಥಳೀಯ ಜನರಿಗೆ ಅವನ ಜಮೀನನ್ನು ಕಿತ್ತು ಇನ್ನೊಬ್ಬರಿಗೆ ಕೊಡುವುದೋ ಇವನ ಜಮೀನು ಕಿತ್ತು ಇನ್ನೊಬ್ಬರಿಗೆ ಕೊಡುವುದೋ ಅಂತಹ ಒಂದು ವ್ಯವಸ್ಥೆ ಸೃಷ್ಟಿ ಮಾಡಿದರೆ ನಾನು ಸ್ಥಳೀಯ ಶಾಸಕನಾಗಿ ಜನರ ಸಮಸ್ಯೆಗೆ ವಿರೋಧ ಮಾಡಿದಂತಾಗುತ್ತದೆ, ಜನರು ನನ್ನನ್ನು ಬಿಡುವುದಿಲ್ಲ ಎಂಬ ಭಯದಿಂದ ಆಯಾಯ ಗ್ರಾಮಗಳ ಸ್ಥಳೀಯ ಜನರನ್ನು ಎಲ್ಲ ಪಕ್ಷದವರನ್ನು ಕರೆಯಿಸಿ ಯಾರು ನಿಜವಾಗಿಯೂ ಜಮೀನು ಮಾಡುತ್ತಿದ್ದರು ಎಂದು ಪತ್ತೆ ಹಚ್ಚಿತಕ್ಕಂತ ಕೆಲಸ ಮಾಡಿದ್ದಾರೆ. ಜಮೀನು ಬಗ್ಗೆ ಏನೂ ವಿಚಾರವೇ ಗೊತ್ತಿಲ್ಲದ ಅಸಿಸ್ಟೆಂಟ್ ಕಮೀಷನರನ್ನು ಅಧ್ಯಕ್ಷರನ್ನಾಗಿ ಮಾಡಿ ಅದನ್ನು ಸಮರ್ಥನೆ ಮಾಡುತ್ತಿರುವುದು ಪ್ರಜಾಪ್ರಭುತ್ವದ ವಿರೋಧ ನೀತಿಯಾಗಿದೆ. ಆದ್ದರಿಂದ ಈ ವಿಷಯದಲ್ಲಿ ನಾನು ವಿರೋಧಮಾಡುತ್ತ ವಾಟಾಳ್ ನಾಗರಾಜರವರ ವಿಚಾರಕ್ಕೆ ಪೂರ್ಣ ಬೆಂಬಲ ಕೊಡುತ್ತ ನಾನು ಧರಣಿ ಕೂಡುತ್ತೇನೆ.

(ಮಾನ್ಯ ಸದಸ್ಯರು ಧರಣಿ ಕುಳಿತರು)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೇ, ರೆವಿನ್ಯೂ ಸಚಿವರು ಯಾವತ್ತೂ ಆ ರೀತಿ ಮಾತಾನಾಡಿದವರಲ್ಲ. ಇದು ನೇರವಾಗಿ ವಾಟಾಳ್ ನಾಗರಾಜರಿಗೆ ನೋವಾದಂತಹ ಸಂಗತಿಯಲ್ಲ. .... ಅವರಿಗೆ ಅಪಮಾನ ಮಾಡುವಂತಹ ರೀತಿಯಲ್ಲಿ ಹೇಳುವುದು ಸರಿಯಲ್ಲ ದಯಮಾಡಿ ಆ ಮಾತನ್ನು ವಾಪಸ್ ತೆಗೆದುಕೊಳ್ಳಿ. ಆಗ ನಾಗರಾಜ್ ಮತ್ತಿತ್ತರರು ವಾಪಸ್ ಬರುತ್ತಾರೆ. ಶಾಸಕರು ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದೀರಾ ಎಂದು ನೇರವಾಗಿ ಅಪಾದನೆ ಮಾಡುವಂಥದ್ದು ತಮ್ಮಂತಹ ಹಿರಿಯ ಸಚಿವರಿಗೆ ಗೌರವ ತರುವ ಸಂಗತಿಯಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ವಿರೋಧಪಕ್ಷದ ನಾಯಕರು ತಿರುಚಿ ಮಾತನಾಡುವುದು ಅನಾವಶ್ಯಕ. ನಾನು ಇದನ್ನು ಹಿಂದಿಯೂ ಅವರಿಗೊಂದುಸಲ ಹೇಳಿದ್ದೇನೆ.... ಅವತ್ತು ನಿಮಗೆ ಕೋಪ

ಬರಲಲ್ಲ, ಇವತ್ತೇಕೆ ಕೋಪ ಬಂತೆಂದು ನನಗೆ ಅರ್ಥವಾಗಲಿಲ್ಲ. ಬಹುಶಃ ನಾನು ಎಡಗಡೆ ಎದ್ದುಬಂದಿದ್ದೇನೋ ಅವರು ಬಲಗಡೆ ಎದ್ದುಬಂದಿದ್ದಾರೋ ಗೊತ್ತಿಲ್ಲ. ಅಧ್ಯಕ್ಷರೇ ನಾನು ಹಾಗೆ ಹೇಳಿದ್ದುದು ಯಾವುದೇ ಸದಸ್ಯರಿಗೂ ಅಗೌರವ ತರಬೇಕೆಂದು ಇಲ್ಲ ಇದರ ಬಗ್ಗೆ ಹಿಂದೆ ಪೂರ್ಣವಾಗಿ ಚರ್ಚೆಯಾಗಿದೆ. ಈಗಾಗಲೇ ಅವರ ಬಗ್ಗೆ ಆರ್ಡಿನೆನ್ಸ್ ಮಾಡಿ ಈಗ ತಿದ್ದುಪಡಿಯನ್ನೂ ಮಂಡಿಸುತ್ತಿದ್ದೇವೆ. ಈಗ ಪುನಃ ಹೇಳಿದ್ದನ್ನೇ ಹೇಳುವುದಕ್ಕೆ ಶುರುಮಾಡಿದರೆ ನನಗೆ ಅರ್ಥವಾಗುವುದಿಲ್ಲ. ಹಿಂದೆ ಇದೇ ವಿಷಯದ ಬಗ್ಗೆ ಚರ್ಚೆಯಾಗಿದೆ ಧರಣಿ ಆಗದೆ ಸಭಾತ್ಯಾಗ ಆಗದೆ, ತಿರುಗಿ ಇದನ್ನು ಏಕೆ ತರುತ್ತಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ. ಈಗೇನು ಉತ್ತರ ಕೊಟ್ಟಿದ್ದೇನೋ ಅಷ್ಟೇ ಉತ್ತರ ನನ್ನದು, ಹೆಚ್ಚಿಗೇನು ಕೊಡುವುದಕ್ಕಾಗುವುದಿಲ್ಲ ಅಧ್ಯಕ್ಷರೇ. ಮಾನ್ಯ ನಾಗರಾಜ್‌ರವರಿಗೆ ನಾನು ಹೇಳಿದ್ದರಿಂದ ಅವರ ಮನಸ್ಸಿಗೆ ನೋವಾಗಿದ್ದರೆ - I am sorry, that much I can say.

ಶ್ರೀ ಸಿ. ಭೈರೇಗೌಡ: ವಾಟಾಳ್ ನಾಗರಾಜರ ಬಗ್ಗೆ ಜಾಲಪ್ಪನವರು ಏನೋ ಮಾತನಾಡಿದ್ದಕ್ಕೆ ಅವರು sorry ಅಂತ ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಸ್ಥಾನಕ್ಕೆ ಹಿಂದಿರುಗಬೇಕು. ಹಿಂದೆಯೆಲ್ಲ ಇದರ ಬಗ್ಗೆ ಚರ್ಚೆಯಾಗಿದೆ, ಧರಣಿ ಆಗಿದೆ, ತೀರ್ಮಾನವಾಗಿರುವಂತಹ ವಿಚಾರ ಇದು.

ಶ್ರೀ ವಾಟಾಳ್ ನಾಗರಾಜ್: ಇಡೀ ಸದನದ ಶಾಸಕರ ಪರವಾಗಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆ ನಾವು ಎತ್ತಿದ್ದೇವೆ. ನಮ್ಮ ಹಕ್ಕಿನ ಪ್ರಶ್ನೆ, ಅದಕ್ಕೆ ಭಂಗಬಂದಾಗ ತಾವು ನಮ್ಮ ರಕ್ಷಣೆಗೆ ಬರಬೇಕಾದದ್ದು ತಮ್ಮ ಕರ್ತವ್ಯ. ಜಾಲಪ್ಪನವರ ಬಗ್ಗೆ ವೈಯಕ್ತಿಕವಾಗಿ ದೇವರಾಣೆ ಪ್ರಾಮಾಣಿಕವಾಗಿ ನನಗೇನೂ ಇಲ್ಲ. ಇದು ನೀತಿ ಪ್ರಶ್ನೆ. ತಾವು ಯಾವ ತರಹ ಬೇಕಾದರೂ ತೀರ್ಮಾನ ತೆಗೆದುಕೊಳ್ಳ ಬಹುದು. ವಾಟಾಳ್‌ನಾಗರಾಜ್ ಪ್ರಶ್ನೋತ್ತರ ಕಾಲಕ್ಕೆ ಅಡ್ಡಿಪಡಿಸಿದರು ಎಂಬ ಭಾವನೆ ತಮಗೆ ಬರಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ: ವಾಟಾಳ್ ನಾಗರಾಜ್ ತೆಗೆದುಕೊಂಡಿರುವ ನಿಲುವು ಸದನದ ಎಲ್ಲ ಶಾಸಕರಿಗೂ ಮಾಡುತ್ತಿರುವ ಅಪಮಾನ ಇದು. ಮಾಡಲಿದ್ದಂತೆ ಬಗರ ಹುಕುಂ ಸಭೆ ಕಾರ್ಯಕಲಾಪ ಅವರ ಅಧ್ಯಕ್ಷತೆಯಲ್ಲೇ ನಡೆಯಬೇಕೆಂಬುದು ಏನಿದೆ ಈ ನಿಲುವಿಗೆ **ನಾವೂ ಬೆಂಬಲ** ಕೊಟ್ಟು ನಾವೂ ಸಭಾತ್ಯಾಗ ಮಾಡುತ್ತೇವೆ.

(ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ನೀತಿಯ ಪ್ರಶ್ನೆ ಏಕೆಂದರೆ ಇವತ್ತು ಸದನದ ಅನೇಕ ಸದಸ್ಯರ ಬೇಡಿಕೆ ಇದು. ಆ ಕಡೆ ಸದಸ್ಯರೂ ಇದಕ್ಕೆ ಒಪ್ಪುತ್ತಾರೆ ಇಲ್ಲಾ ಅಂತ ಇಲ್ಲ. ನೀವು ಹಠಹಿಡಿದುಕೊಂಡು ನಾವು ಇದೇ ರೀತಿ ಮುಂದುವರೆದುಕೊಳ್ಳಬೇಕು ಅಧಿಕಾರಿಗಳನ್ನೇ ಇಟ್ಟುಕೊಂಡು ನಡೆಸಿಕೊಳ್ಳಬೇಕು ಅಂದರೆ ಖಂಡಿತವಾಗಿ ಇದರಿಂದ ಪ್ರಜಾಪ್ರಭುತ್ವದ ಯಾವುದೇ ಸರ್ಕಾರಕ್ಕೂ ಭೂಷಣ ಬರುವುದಿಲ್ಲ. ನಾವು ಬದಲಾವಣೆ ಏಕೆ ಮಾಡುತ್ತಿದ್ದೇವೆ. ಅನೇಕ ಕಾರ್ಪೊರೇಷನ್ ಬೋರ್ಡ್ ಕಮಿಟಿಗಳೇ ಇರಬಹುದು ಟ್ರಿಬ್ಯುನಲ್ಸ್ ಇರಬಹುದು. ಇವತ್ತಿನ ಬಳಕೆದಾರರ ವೇದಿಕೆ

ಎಂಬುದರಲ್ಲೂ ನಾನ್ ಅಫಿಶಿಯಲ್ಸ್ ಇದ್ದಾರೆ. ಜಡ್ಜ್ ಅದರ ಚೇರ್ಮನ್‌ನಾಗಿದ್ದಾರೆ ಮೆಂಬರ್ ನಾನ್ ಅಫಿಶಿಯಲ್ಸಾಗಿರುತ್ತಾರೆ. ಇದನ್ನು ಏಕೆ ಪ್ರತಿಷ್ಠೆ ವಿಷಯ ಮಾಡಿಕೊಂಡಿರಬೇಕು, ಕೇವಲ ವಿರೋಧಪಕ್ಷದವರು 108 ಜನರಿದ್ದಾರೆ, ಅದಕ್ಕೆ ಅಲ್ಲಿ ಎಲ್ಲ ಎಂಎಲ್‌ಎಗಳೂ ಆಗುತ್ತಾರೆ ಅಂದರೆ ಅದರ ಮೇಲೆ ಹೋಗುವುದಿಲ್ಲ ವೋಟ್‌ನ್ನು ಅದರ ಮೇಲೆ ಯಾರೂ ಕೊಡುವುದಿಲ್ಲ, ನಾವು ಬಹಳ ಕೆಲಸ ಮಾಡಿ ನೋಡಿದ್ದೇವೆ. ಜನ ಚುನಾವಣೆಯಲ್ಲಿ ತೀರ್ಮಾನ ಮಾಡುತ್ತಾರೆಯೇ ಹೊರತು ನಮ್ಮ ಕೆಲಸದ ಹೊರತಾಗಿ ತೀರ್ಮಾನ ಮಾಡುವುದು ಬಹಳ ಕಡಿಮೆ. ಅದಕ್ಕೆ ದಯವಿಟ್ಟು ನೀವಿದಕ್ಕೆ ಒಪ್ಪಿಕೊಳ್ಳಿ, ಇಲ್ಲ ನಾವು ಒಪ್ಪಿಕೊಳ್ಳಬೇಕು, ಇಲ್ಲ, ನಾವು ಒಪ್ಪಿಕೊಳ್ಳುವುದಿಲ್ಲ ಇದರಲ್ಲಿ ಬದಲಾವಣೆ ಇಲ್ಲವೆಂದರೆ ಅಧ್ಯಕ್ಷರೇ ನಾವು ಅನಿವಾರ್ಯವಾಗಿ ಸಭಾತ್ಯಾಗ ಮಾಡುತ್ತೇವೆ, ಪ್ರತಿಭಟಿಸುತ್ತೇವೆ ಮತ್ತು ಇಂತಹ ಹಠಮಾರಿ ನೀತಿಯನ್ನು ತಾವು ಮುಂದುವರೆಸಬಾರದೆಂದು ತಮ್ಮ ಮೂಲಕ ಅವರಿಗೆ ಕೇಳಿಕೊಳ್ಳುತ್ತೇನೆ. ಈಗಲಾದರೂ ಏನಾದರೂ ಪರಿವರ್ತನೆ ಇದ್ದರೆ ಅವರು ಸ್ಪಷ್ಟಪಡಿಸಲಿ. ಇಲ್ಲ ನಾವು ಇದೇ ಮಾಡುತ್ತೇವೆಂದರೆ, ಖಂಡಿತವಾಗಿ ಈ ನಿಲುವನ್ನು ವಿರೋಧಿಸಿ, ನಾವೂಕೂಡ ಸಭಾತ್ಯಾಗ ಮಾಡುತ್ತೇವೆ.

SHRI B.I. PATIL: We also protest by walking out.

(MES Members withdrew from the House)

ಶ್ರೀ ಆರ್.ಎಲ್. ಜಾಲಪ್ಪ: ಅಧ್ಯಕ್ಷರೇ ಅವರ ಸರ್ಕಾರ ಇದ್ದಾಗಲೂ ಅಡಿಷನಲ್ ಕಮಿಟಿ ಅಂತ ಮಾಡಿ ಅದಕ್ಕೆ ಅಸಿಸ್ಟೆಂಟ್ ಕಮಿಷನರ್ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು, ಆವಾಗ ಏಕೆ ಮಾಡಿದ್ದರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆಗ ಲಾಂಡ್‌ರಿಫಾರ್ಮ್ಸ್‌ನಲ್ಲಿ ಪ್ರಾರಂಭದಲ್ಲಿ ಇದನ್ನು ಮಾಡಿದ್ದು ಅದನ್ನು ತಿಳಿದುಕೊಂಡ ಮೇಲೆ ಅಫಿಶಿಯಲ್ಸ್ ಮಾಡುವುದು ಬೆಟರ್ ಎಂದು ನಾನೇ ಎಲ್ಲರ ಜೊತೆ ಚರ್ಚೆ ಮಾಡಿ ಮಾಡಿದ್ದುದು.

SRI R.L. JALAPPA : I am sorry. After that also, you again formed additional committees with Asst. Commissioners as Chairman.

ನಾನು ಇದನ್ನು ತೆಗೆದಿದ್ದೇನೆ ಎಂದರೆ, ಇಲ್ಲ, ಇಲ್ಲ ಎಂದರೆ ನನ್ನ ತಾಲೂಕಿನಲ್ಲೇ ಒಂದು ಅಡಿಶನಲ್ ಕಮಿಟಿ ಮಾಡಿದ್ದರು. ಅವನ್ನೆಲ್ಲ ಎಲ್ಲ ಕಡೆ ನಾವೇ ತೆಗೆಸಿ ಎಲ್ಲ ಮುಚ್ಚಿಸಿ ಬಿಟ್ಟಿದ್ದೇವೆ.

(ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ: ಅಡಿಶನಲ್ ಕಮಿಟಿಯಲ್ಲಿ ಎಷ್ಟು ಕೇಸ್ ತೀರ್ಮಾನವಾಗಿದೆ ಎಂದು ನೀವೇ ಹೇಳಿ. ನೀವು ಯಾರ ಮೇಲೋ ಗೂಬೆ ಕೂರಿಸುವುದು ಸರಿಯಲ್ಲ. ನೀವು ಯಾವ್ಯಾವ ಸವಲತ್ತು ಮಾಡಿಕೊಟ್ಟಿದ್ದೀರಿ? ಸರ್ವೆಯರ್‌ಗಳನ್ನು ಕೊಟ್ಟಿದ್ದೀರಾ? ಏನೂ ವ್ಯವಸ್ಥೆ ಮಾಡಿಕೊಡದೆ ನೇರವಾಗಿ ಶಾಸಕರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ: ಅಧ್ಯಕ್ಷರೇ ಸರ್ಕಾರದ ನೀತಿ ಶಾಸಕರ ಮಟ್ಟಿಗೆ ಬಹಳ ದುರಂತಮಯವಾಗಿದೆ. ಇದರ ಬಗ್ಗೆ ನಮ್ಮ ಪಕ್ಷದ ನಾಯಕರೂ ಸರ್ಕಾರಕ್ಕೆ ತಿಳಿಹೇಳಿದ್ದಾರೆ. ಆದರೂ ಕೂಡ ಸರ್ಕಾರ ಇವತ್ತು ಶಾಸಕರಿಗೆ ಅಪಮರ್ಯಾದೆ ಮಾಡುವ ಬಗ್ಗೆ ನಮ್ಮ ಪಕ್ಷ ಕೂಡ ಪ್ರತಿಭಟಿಸಿ ನಾವೂ ಸಭಾತ್ಯಾಗ ಮಾಡುತ್ತೇವೆ.

(ಕೆ.ಸಿ.ಪಿ. ಸದಸ್ಯರೂ ಸಭಾತ್ಯಾಗ ಮಾಡಿದರು.)

ರಾಜ್ಯದ ಸಹಕಾರ ಸಂಘಗಳಿಗೆ ನಬಾರ್ಡ್ ಸಂಸ್ಥೆಯಿಂದ ಪುನರ್‌ಧನ

47-ಶ್ರೀ ಜಿ. ಬಸವಣ್ಣೆಪ್ಪ (ಹೊಳಿಹೊನ್ನೂರ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಬಾರ್ಡ್ ಸಂಸ್ಥೆಯಿಂದ ರಾಜ್ಯದ ಸಹಕಾರ ಸಂಘಗಳಿಗೆ ಪುನರ್ಧನ ರೂಪದಲ್ಲಿ ವಿತರಣೆ ಮಾಡಿರುವ ಹಣವೆಷ್ಟು?*

ಆ) *ಈ ಪೈಕಿ ನೀರಾವರಿಗೆ ವಿನಿಯೋಗಿಸಲ್ಪಟ್ಟಿರುವ ಹಣದ ಪ್ರಮಾಣವೆಷ್ಟು?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):

ಅ) 1995-96ನೇ ಸಾಲಿನಲ್ಲಿ ದಿನಾಂಕ: 15-8-1995ರವರೆಗೆ ನಬಾರ್ಡ್ ಸಂಸ್ಥೆಯಿಂದ 59.68 ಕೋಟಿ ರೂ.ಗಳು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ 30.67 ಕೋಟಿ ರೂ.ಗಳು ಒಟ್ಟು 90.35 ಕೋಟಿ ರೂ.ಗಳನ್ನು ಪುನರ್ಧನ ರೂಪದಲ್ಲಿ ಒದಗಿಸಲಾಗಿದೆ.

ಆ) ಈ ಪೈಕಿ ನೀರಾವರಿ ಉದ್ದೇಶಕ್ಕೆ ವಿನಿಯೋಗಿಸಲಾದ ಹಣವು 17.80 ಕೋಟಿ ರೂ. ಗಳಾಗಿರುತ್ತದೆ.

ಶ್ರೀ ಜಿ. ಬಸವಣ್ಣೆಪ್ಪ: ಅಧ್ಯಕ್ಷರೇ ನಬಾರ್ಡ್ ಸಂಸ್ಥೆಯಿಂದ ಒಟ್ಟು 90.35 ಕೋಟಿ ರೂ. ಪುನರ್ಧನ ರೂಪದಲ್ಲಿ ಒದಗಿಸಿದ್ದಕ್ಕೆ ಮೊದಲನೆಯದಾಗಿ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಈಗ ಎಲ್ಲಾ ಸಹಕಾರಿ ಸಂಘಗಳೂ ನಿಗದಿತ ಪ್ರಮಾಣದಲ್ಲಿ ಸಾಲ ವಸೂಲು ಮಾಡಿವೆಯೇ? ಇಲ್ಲದೇ ಹೋದರೆ ಸಾಲ ಬಾಕಿ ಇರುವ ಹಣವೆಷ್ಟು? ಸಾಲ ವಸೂಲಿ ಮಾಡದಿರುವ ಸಂಸ್ಥೆಗಳೆಷ್ಟು?

ಶ್ರೀ ಎಸ್.ಎಸ್. ಪಾಟೀಲ್: ಹನಿನೀರಾವರಿ ಬಗ್ಗೆ ತಾವು ಪ್ರಶ್ನೆ ಕೇಳಿಲ್ಲ, ಆದರೂ ತಮ್ಮ ಪ್ರಶ್ನೆಯಲ್ಲಿ ನೀರಾವರಿಗೆ ವಿನಿಯೋಗಿಸಿರುವ ಹಣದ ಪ್ರಮಾಣವೆಷ್ಟು ಎಂದಿದ್ದೀರಿ ಅದಕ್ಕೆ 17.80 ಕೋಟಿ ರೂಪಾಯಿಗಳನ್ನು ಹನಿನೀರಾವರಿಗಾಗಿ ಒದಗಿಸಿದೇವೆ.